**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆಃ 399/2022**

**ಪಿರ್ಯಾದಿದಾರರುಃ** ರಾಜ್ಯ ಪರ ಪೊಲೀಸರು,
ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣೆ.

**ವಿರುದ್ದ**

**ಆರೋಪಿತರುಃ** ಕೆ.ಎಸ್. ಪುನೀತ್ ಕುಮಾರ್ ಬಿನ್ ಶಿವಣ್ಣ,
20 ವರ್ಷ ವಯಸ್ಸು,
ವಾಸಃ ಕಾಮಸಮುದ್ರ ಗ್ರಾಮ,
ಮಾವಿನಕೆರೆ ಅಂಚೆ, ಹಳೇಕೋಟೆ ಹೋಬಳಿ,
ಹೊಳೆನರಸೀಪುರ ತಾಲ್ಲೂಕು,
ಹಾಸನ ಜಿಲ್ಲೆ.

**ದೋಷಾರೋಪಣೆ**

ದಿನಾಂಕಃ 23.11.2021 ರಂದು ಮಧ್ಯಾಹ್ನ 2.25 ಗಂಟೆ ಸಮಯದಲ್ಲಿ, ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಚನ್ನರಾಯಪಟ್ಟಣ ಟೌನ್, ಮೈಸೂರು ರಸ್ತೆ, ಗ್ರೀನ್ ಟ್ರೀ ಡಾಬಾದ ಪಕ್ಕ ಆರೋಪಿಯಾದ ನೀವು ಹೋಂಡಾ ಡಿಯೋ ವಾಹನದ ನೊಂದಣಿ ಸಂಖ್ಯೆ ಕೆಎ.13.ಇಆರ್.9984 ದ್ವಿ ಚಕ್ರ ವಾಹನದಲ್ಲಿ ಒಂದು ಪ್ಲಾಸ್ಟಿಕ್ ಕವರ್ ನಲ್ಲಿ 325 ಗ್ರಾಂ ಒಣ ಗಾಂಜಾವನ್ನು ಅಕ್ರಮವಾಗಿ ಸಾಗಾಣಿಕೆ ಮಾಡಿ, ಆ ಮೂಲಕ ಆರೋಪಿಯಾದ ನೀವು **ಎನ್.ಡಿ.ಪಿ.ಎಸ್. ಕಾಯ್ದೆ ಕಲಂ. 8**(ಸಿ) ರ ನಿಯಮಗಳನ್ನು ಉಲ್ಲಂಘಿಸಿ, ಇದೇ **ಕಾಯ್ದೆ ಕಲಂ.20**(ಬಿ)(**ii**)(**A**) ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ.

**ಪ್ರಶ್ನೆ:** 1. ಈಗ ನಿಮಗೆ ಓದಿ ಹೇಳಲಾದ ನಿಮ್ಮ ಮೇಲಿನ ದೋಷಾರೋಪಣೆಯು ನಿಮಗೆ ತಿಳಿಯಿತೆ?

ಉತ್ತರ: ಅರ್ಥವಾಯಿತು

**ಪ್ರಶ್ನೆ:** 2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ನಡೆಯಲೆಂದು ಬಯಸುತ್ತೀರಾ?

ಉತ್ತರ: ವಿಚಾರಣೆಯಾಗಬೇಕು

(ಈ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ ಕೇಳಲಾಗಿ ಆರೋಪಿಯು ನೀಡಿರುವ ಉತ್ತರಗಳನ್ನು ಪಡೆದುಕೊಂಡಿದ್ದು ಅವು ಸರಿ ಇವೆ ಎಂದು ದೃಢೀಕರಿಸಲಾಯಿತು)

ದಿನಾಂಕ: **11.09.2023**

(ದೀಪು ಬಿ.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ